ಮನೆಯಲ್ಲಿ ನಿಂಗಪ್ಪ- ಅಂಬವ್ವರ ಸಂಸಾರ, ಇವರಿಗಿಬ್ಬರು ಗಂಡು ಮಕ್ಕಳು ಮತ್ತು ಅಂಬವ್ವಳ ತಾಯಿ ಮಲ್ಲವ್ವ. ಅಂಬವ್ವ ತನ್ನ ತಾಯಿ ಮಲ್ಲವ್ವನನ್ನ ಪ್ರೀತಿಯಿಂದ ಹಾಗೂ ಇಳೆವಯಸ್ಸಿನ ಕಾರಣಕ್ಕೂ ತನ್ನ ಜೊತೆಗೆ ಇರಿಸಿಕೊಂಡಿದ್ದಳು. ಮಲ್ಲವ್ವಳಿಗೆ ಗಂಡನಿಲ್ಲ. ಇರೋ ಎರಡು ಗಂಡು ಮಕ್ಕಳ ಜತಿಗೆ ಸುಖ ಕಾಣದೆ, ತನ್ನ ಎಪ್ಪತ್ತೈದರ ವಯಸ್ಸಿನಲ್ಲೂ ಮಗಳ ಮನೆಯಲ್ಲಿಯೇ ಖಾಲಿ ಇರಬಾರದೆಂಬ ಸ್ವಾಭಿಮಾನಕ್ಕೆ ಹೊಲಮನಿ ಕೆಲಸ ಮಾಡುವ ದುಡಿತದ ಮುದಿಜೀವ.

ಸಣ್ಣ ಮನೆ. ಅಡುಗೆ ಕೋಣೆ, ಹಜಾರ ಮತ್ತು ಹಜಾರಕ್ಕಂಟಿಕೊಂಡೇ ಬಚ್ಚಲು- ಕಕ್ಕಸದ ಕೋಣೆ. ದೇವರ ಜಗುಲಿ ಅಡುಗೆ ಕೋಣೆಯ ಶೆಲ್ಫಿನ ಅರ್ಧಭಾಗದಲ್ಲೇ ಪಾಲು ಕಂಡಿತ್ತು. ಯಥಾಪ್ರಕಾರ ಮುಂಜಾನೆ ನಿಂಗಪ್ಪ ಬಲಗಡೆ ಮಗ್ಗಲಿನಿಂದ ಎದ್ದು ಎರಡೂ ಅಂಗೈಗಳನ್ನ ಉಜ್ಜುತ್ತಾ ಮುಖದೆಡೆಗೆ ತಂದು ಕಣ್ಣುಬಿಟ್ಟು, 'ಕರಾಗ್ರೇ ವಸತೇ ಲಕ್ಷ್ಮೀ...' ಎಂದು ಕರದರ್ಶನ ಮಾಡಿಕೊಂಡ. ಹೆಂಡತಿ ಅಂಬವ್ವ ಆಗಲೇ ಮನೆಯಂಗಳದ ಕಸ ಹೊಡೆದು, ಸಗಣಿ ಸಾರಿಸಿ ರಂಗೋಲಿ ಇಟ್ಟು ಬರುತ್ತಿದ್ದಳು. ಹಿರೀಮಗ ಸುರೇಶಿ ಇನ್ನೂ ಹಾಸಿಗೆಯಲ್ಲೇ ಮಲಗಿದ್ದ. 'ಸೂರಿ.. ಏ ಸೂರಿ... ಎದ್ದಳೋ' ಎಂದು ನೀರು ಚಿಮುಕಿಸಿ ಮಗನನ್ನು ಎಬ್ಬಿಸಲೆತ್ನಿಸಿದಳು. ಸುರೇಶಿ ಹೊದ್ದ ಚಾದರದಿಂದ ಮುಖ ಒರೆಸಿಕೊಳ್ಳುತ್ತಾ ಮಗ್ಗಲು ಬದಲಿಸಿದನಷ್ಟೇ ಹೊರತು, ಯಾವ ಸೂಚನೆಗಳು ಸಿಕ್ಕಲಿಲ್ಲ. ಇನ್ನು ಸಣ್ಣಮಗ ಚಂದ್ರ ಮನೆಮನೆಗೆ ಪೇಪರ್ ಹಾಕಲು ಹೋದವನು ಇನ್ನೂ ಬಂದಿರಲಿಲ್ಲ. ಮಲ್ಲವ್ವ ಎದ್ದು ಮನೆಯ ಹಿತ್ತಲಲ್ಲಿ ಹೂಡಿದ ಸೌದೆ ಒಲೆಯೊಳಗಿನ ಬೂದಿಯನ್ನ ತಿಪ್ಪೆ ಕಾಣಿಸಿ, ರೊಟ್ಟಿ ಬಡಿಯಲು ಒಲೆಹಚ್ಚಿ, ಹಿಟ್ಟು ನಾದಲು ನೀರಿಗಿಟ್ಟುಕೊಂಡಳು.

ನಿಂಗಪ್ಪ ಮುಖ ತೊಳೆಯುತ್ತಲೇ ಗಂಟಲೊಳಗಿನ ಕಫ ಕ್ಯಾಕರಿಸುತ್ತಾ ಉಗಿದು, ಬಾಯೊಳಕ್ಕೆ ನೀರು ಹಾಕಿಕೊಂಡು ಗುಳುಗುಳು ಶಬ್ದ ಮಾಡಿ ಬಾಯಿ ಸ್ವಚ್ಛ ಮಾಡಿಕೊಂಡ. ಹಜಾರದ ಟಿ.ವಿ ದೈವನಾಮ ಸ್ತುತಿಗೀತೆಗಳಿಂದ ತನ್ನ ಪಾಡಿಗೆ ತಾನು ಗೊಣಗಿಕೊಳ್ಳುತ್ತಲಿತ್ತು. ಟಿ.ವಿ ಎದುರಿಗೆ ಕುರ್ಚಿ ಹಾಕಿ ರಿಮೋಟ್ ಹಿಡಿದು ಚಾನೆಲ್ ಬದಲಿಸಲು ಯತ್ನಿಸಿದ. ಅದು ಮಿಸುಗಾಡಲಿಲ್ಲ. ಬದಲಿಗೆ ಸೆಡ್ಡು ಹೊಡೆದು ಹಲ್ಲು ಕಿಸಿದಂತೆ ಕಂಡಿತು. ರಿಮೋಟ್ ಸೆಲ್ ವೀಕಾಗಿದ್ದರಿಂದ ತೊಡೆಗೆರಡು ಸಲ ಬಡಿದುಕೊಂಡು ಒತ್ತಿದ. ಈಗ ಚಾನೆಲ್‌ಗಳು ಎಂಬತ್ತರಲ್ಲಿ ಓಡತೊಡಗಿದವು. ಗಪ್ಪನೆ ಹಿಡಿದು ನಿಲ್ಲಿಸುವಂತೆ ರಿಮೋಟ್ ಸೆಲ್ ಕಿತ್ತು, 'ತಗಾ ಇವನ್ನ ಸಲ್ಪ ಬಿಸಿಗಿಡು' ಎಂದು ಒಲೆ ಮೇಲೆ ಚಹಾ ಕಾಸುತ್ತಿದ್ದ ಹೆಂಡತಿ ಅಂಬವ್ವಳ ಕಡೆಗೆ ಕೈ ಮಾಡಿದ. ತುಸು ಮುನಿಸಿನಲೆ ಆಕೆ, 'ಅದಕ್ಕೊಂದ್ಯಾಲ್ಡ್ ಸೆಲ್ ತರಾಕಾಗಲ್ಲಾ, ನಿನ್ನ ಯಾಲ್ಡ್ ದಿನದ್ ತಂಬಾಕಿನ್ ಕರ್ಚಿನ್ಯಾಗ ಬರತಾವ್. ಏಸ್ ದಿನಾ ಅಂತಾ ಬಿಸಿಮಾಡದು, ಹಿಂಗ ಮಾಡಿದ್ರ ಟಿ.ವಿ ಶೆಟಗಂಡ್ ಹೊಕತಿ ನೋಡ್' ಅಂತ ತನ್ನ ಅಣ್ಣ ಕೊಡಿಸಿದ ಟಿ.ವಿಯ ಕಾಳಜಿಗೆ ಮುಂದಾಗುತ್ತಲೇ, ಚಹಾ ಸೋಸಿ ಗಂಡನೆದುರು ಲೋಟ ಹಿಡಿದಳು. ಉಟ್ಟ ಬಟ್ಟೆಯಿಂದ ತನ್ನನ್ನು ಮನೆಯಿಂದ ಹೊರ ಹಾಕಿದ ನಂತರ ಹೆಂಡತಿ ಮನೆಯವರ ಸಹಕಾರ ಹಾಗೂ ತನ್ನ ಶ್ರಮ ಶೂನ್ಯದಿಂದ ಆರಂಭವಾದದನ್ನು ನೆನೆದು ಆತ ಸುಮ್ಮನಾಗುತ್ತಿದ್ದ. ಲೋಟ ಎತ್ತಿಕೊಂಡು ಟಿ.ವಿಯ ಬುಡಕ್ಕೆ ಹೋಗಿ ಕೈಯಾಡಿಸುತ್ತಾ ದಿನಭವಿಷ್ಯ ಹೇಳುವ ಚಾನೆಲ್‌ಗೆ ಕಾರ್ಯಕ್ರಮ ಬದಲಿಸಿದ. ಹೆಂಡತಿಯೂ ಹಾಗೆ ಚಹಾ ಹೀರುತ್ತಾ ಟಿ.ವಿ ಮುಂದೆ ಕೂತು ಕಣ್ಣರಳಿಸಿದಳು.

ಮಾಡರ್ನ್ ಟಿ.ವಿ ಜೋಯಿಸಪ್ಪ ದಿನಕ್ಕೊಂದು ಸಲಹೆ ಕೊಡುವಂತೆ ಅವತ್ತೂ ಏನೇನೊ ಹೇಳಿ ಮುಗಿಸಿದ. ಒಂದೇ ದಿನಭವಿಷ್ಯಕ್ಕೆ ತುಷ್ಟಿಗುಣ ಸಿಗಲಾರದೆಂಬಂತೆ ನಿಂಗಪ್ಪ ಬೇರೆ ಬೇರೆ ಜ್ಯೋತಿಷಿಗಳು ಹೇಳುವ ಥರಹೇವಾರಿ ಹುಚ್ಚಾಟಗಳನ್ನ ತಲೆಗೆ ತುಂಬಿಕೊಳ್ಳುತ್ತಾ, ಕೊನೆಗೆ ತನ್ನ ರಾಶಿಗೆ ಏಳರಾಟ ಶನಿ ಹಿಡದಾನ ಅಂತ ದಿನೇದಿನೇ ಕನ್‌ಫರ್ಮ್ ಮಾಡಿಕೊಳ್ಳುತ್ತಿದ್ದ. ಈ ಶನಿಯ ಕಾಟದ ಶಾಂತಿಗಾಗಿ ಹನುಮಪ್ಪನ ಪಾದ ಹಿಡಿಯುವುದಾಗಿಯೂ, ಎಳ್ಳೆಣ್ಣೆಯನ್ನು ಮೈ ಹಾಗೂ ತಲೆಗೆ ಬಳಸುವುದಾಗಿಯೂ ಸಲಹೆ ಕಂಡುಕೊಂಡಿದ್ದ. ಹೀಗೆ ತನ್ನದೊಂದೇ ದಿನಭವಿಷ್ಯ ಕೇಳಿಸಿಕೊಂಡು ಸುಮ್ಮನಾಗುವುದರ ಬದಲು ಮನಿಮಂದೀದೆಲ್ಲಾ ರಾಶಿಭವಿಷ್ಯ ಕೇಳಿಸುತ್ತಿದ್ದ.